ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಬುಧವಾರ, ದಿನಾಂಕ: 17ನೇ ಜುಲೈ, 2019

ಭೂ ಸಾಗುವಳಿ ಸೌಕರ್ಯಗಳ ಬಗ್ಗೆ

ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) :-

228 (376) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯಾದ್ಯಂತ ಖುಷ್ಕಿ ಮತ್ತು ನೀರಾವರಿ ಭೂ ಸಾಗುವಳಿ ಮಾಡುತ್ತಿರುವ ಎಲ್ಲಾ ರೈತಾಪಿ ವರ್ಗದವರ ಭೂಮಿಗಳಿಗೆ ಸರ್ವೆ ನಂಬರ್, ಎಂ.ಆರ್. ನಂಬರ್ ಹಾಗೂ ಖಾತಾ ನಂಬರ್ಗಳನ್ನು ಒದಗಿಸಲಾಗಿದೆಯೇ; (ವಿವರ ಒದಗಿಸುವುದು)

(ಆ) ಹಾಗಿದ್ದಲ್ಲಿ, ಸುಮಾರು ವರ್ಷಗಳಿಂದ ಖುಷ್ಕಿ ಮತ್ತು ನೀರಾವರಿ ಜಮೀನುಗಳು ರೈತರ ಒಡೆತನದಲ್ಲೇ ಇದ್ದು, ಈ ಜಮೀನುಗಳನ್ನು ಭೂ ಸಾಗುವಳಿ ಮಾಡುತ್ತಿರುವ ಸಾವಿರಾರು ಎಕರೆ ಜಮೀನುಗಳಿಗೆ ೯೯೯೯ ಎಂದು ಸಾಮೂಹಿಕವಾಗಿ ಸರ್ವೆ ನಂಬರನ್ನು ಯಾವ ಕಾರಣಕ್ಕಾಗಿ ನಿಗದಿ ಮಾಡಲಾಗಿದೆ; (ವಿವರ ಒದಗಿಸುವುದು)

(ಇ) ಹಾಗಿದ್ದಲ್ಲಿ, ರೈತರುಗಳ ಜಮೀನಿಗೆ ಸಾಮೂಹಿಕವಾಗಿ ೯೯೯೯ ಸರ್ವೆ ನಂಬರ್ ನೀಡಿರುವುದನ್ನು ಯಾವಾಗ ರದ್ದುಪಡಿಸಲಾಗುವುದು ಮತ್ತು ಕಾನೂನಿನ ಅನ್ವಯ ಸದರಿ ರೈತರ ಜಮೀನುಗಳಿಗೆ ಸರ್ವೆನಂಬರ್, ಎಂ.ಆರ್ ನಂಬರ್ ಹಾಗೂ ಖಾತೆಗಳನ್ನೊಳಗೊಂಡಂತೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸಲಾಗುವುದು? (ಮಾಹಿತಿ ಒದಗಿಸುವುದು)